**ಕರ್ನಾಟಕ ಸರ್ಕಾರ**

**1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.**

**ಸಿ.ಸಿ.ನಂ.1156/2022**

ಪಿ.ಡಬ್ಲ್ಯೂ: 2

ಸಿ.ಡಬ್ಲ್ಯೂ: 6

ಸಾಕ್ಷಿದಾರರ **ಹೆಸರು** : ಕೆ ಆರ್ ಅಶ್ವಥ್

ತಂದೆ **ಹೆಸರು** : ಕೆ ಟಿ ರಾಮಸ್ವಾಮಿ

**ವಯಸ್ಸು** : **70 ವರ್ಷ**

**ಉದ್ಯೋಗ** : ಆರ್ ಟಿ ಒ ಕಛೇರಿಯಲ್ಲಿ ಕೆಲಸ

**ವಾಸಸ್ಥಳ** : ಲಕ್ಕವಳ್ಳಿ ಗ್ರಾಮ

**ದಿನಾಂಕ: 15-06-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆ :** ಸಹಾಯಕ ಸರ್ಕಾರಿ ಅಭಿಯೋಜಕರವರಿಂದ

ಚಾಸಾ-1 ನನ್ನ ಹೆಂಡತಿ . ಚಾಸಾ-7 ನನ್ನ ಮಗಳು. ಆರೋಪಿತರು ನಮ್ಮ ಮನೆಗೆ ಅತೀಕ್ರಮ ಪ್ರವೇಶ ಮಾಡಿರುವುದಿಲ್ಲ. 1 ಮತ್ತು 2ನೇ ಆರೋಪಿತರು ನನಗೆ ಯಾವುದೇ ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ. 1 ಮತ್ತು 2ನೇ ಆರೋಪಿತರು ನನ್ನ ಮೇಲೆ ಹಲ್ಲೆ ಮಾಡಿರುವುದಿಲ್ಲ. 2ನೇ ಆರೋಪಿಯು ಚಾಸಾ-1 ರವರ ಮೇಲೆ ಹಲ್ಲೆ ಮಾಡಿರುವುದಿಲ್ಲ. ಆರೋಪಿತರು ನನಗೂ ಹಾಗೂ ಚಾಸಾ-1 ರವರಿಗೆ ಕೊಲೆ ಬೆದರಿಕೆ ಹಾಕಿರುವುದಿಲ್ಲ. ಆರೋಪಿಗಳಿಂದ ನನಗೆ ಯಾವುದೇ ರೀತಿಯ ತೊಂದರೆಯಾಗಿರುವುದಿಲ್ಲ. ನಾನು ಈ ಪ್ರಕರಣದ ಸಂಬಂಧ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆದುಕೊಂಡಿರುವುದಿಲ್ಲ. ಈ ಪ್ರಕರಣದ ಸಂಬಂಧ ಬೇರೆ ಏನೂ ಗೊತ್ತಿರುವುದಿಲ್ಲ.

**( ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)**

**ಪಾಟೀ ಸವಾಲು:** ಸಹಾಯಕ ಸರ್ಕಾರಿ ಅಭಿಯೋಜಕರವರಿಂದ

ದಿನಾಂಕ: **16-07-2020** ರಿಂದ **31-07-2020** ರ ಮಧ್ಯದ ಅವಧಿಯಲ್ಲಿ ಪ್ರಾಕ್ಷಿಕ ಸತ್ಯಪ್ರಭಾ ಕನ್ನಡ ಪತ್ರಿಕೆಯಲ್ಲಿ ಅರಣ್ಯ ಅಭಿವೃದ್ಧಿ ಹೆಸರಿನಲ್ಲಿ ಸರ್ಕಾರದ ಹಣ ಲೂಟಿ, ಅಧಿಕಾರಿ ವಿರುದ್ಧ ಕ್ರಮ ಏಕಿಲ್ಲ**?** ಎಂಬ ಶೀರ್ಷಿಕೆಯಲ್ಲಿ ನಾನು ವರದಿ ಮಾಡಿದ್ದು, ದಿ: **20-08-2020** ರಂದು ಸಂಜೆ **6-00** ಗಂಟೆ ಸಮಯದಲ್ಲಿ ಲಕ್ಕವಳ್ಳಿಯ ನಮ್ಮ ಮನೆಯ ಹತ್ತಿರ ಆರೋಪಿತರು ಅಕ್ರಮ ಕೂಟ ಕಟ್ಟಿಕೊಂಡು ಅತೀಕ್ರಮ ಪ್ರವೇಶ ಮಾಡಿರುತ್ತಾರೆಂದರೆ ಸರಿಯಲ್ಲ. **1** ಮತ್ತು **2**ನೇ ಆರೋಪಿತರು ನನಗೆ ಅವಾಚ್ಯ

ಶಬ್ದಗಳಿಂದ ಬೈದು ನನ್ನ ಕೆನ್ನೆಗೆ ಕೈಯಿಂದ ಹೊಡೆದು ಹಲ್ಲೆ ಮಾಡಿರುತ್ತಾರೆಂದರೆ ಸರಿಯಲ್ಲ. 2 ನೇ ಆರೋಪಿಯು ನನಗೆ ಕೈಗಳಿಂದ ಕೈಕಾಲುಗಳಿಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯ ಮಾಡಿರುತ್ತಾರೆಂದರೆ ಸರಿಯಲ್ಲ. 2 ನೇ ಆರೋಪಿಯು ಜಗಳ ಬಿಡಿಸಲು ಚಾಸಾ-1 ರವರ ತಲೆ ಕೂದಲು ಹಿಡಿದು ಎಳೆದಾಡಿ, ಕೆಳಗೆ ಬೀಳಿಸಿ ಅವಮಾನ ಮಾಡಿರುತ್ತಾರೆಂದರೆ ಸರಿಯಲ್ಲ. ನನಗೆ ಮತ್ತು ಚಾಸಾ-1 ರವರಿಗೆ ಆರೋಪಿತರು ಕೊಲೆ ಬೆದರಿಕೆ ಹಾಕಿರುತ್ತಾರೆಂದರೆ ಸರಿಯಲ್ಲ.

ದಿಃ 23-08-2020 ರಂದು - - - - ಪುನಃ ನೋಡಿದರೆ ಗುರುತಿಸುತ್ತೇನೆಂದು ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆಂದರೆ ಸರಿಯಲ್ಲ. ಸಾಕ್ಷಿಯ ಅಲ್ಲಗೆಳೆದ ಹೇಳಿಕೆ ಭಾಗವನ್ನು ನಿಪಿ-7 ಎಂದು ಗುರುತಿಸಲಾಯಿತು.

ನಾವು ಮತ್ತು ಆರೋಪಿತರು ಈ ಪ್ರಕರಣವನ್ನು ರಾಜಿ ಮಾಡಿಕೊಂಡಿದ್ದೇವೆ ಎಂದರೆ ಸರಿ. ನಾವು ಮತ್ತು ಆರೋಪಿತರು ಈ ಪ್ರಕರಣವನ್ನು ರಾಜಿ ಮಾಡಿಕೊಂಡ ಕಾರಣ ಆರೋಪಿಗಳಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲು ಃ ಆರೋಪಿ ಪರ ವಕೀಲರಿಂದ.**

ಪಾಟೀ ಸವಾಲು ಇರುವುದಿಲ್ಲ

**ಮರುವಿಚಾರಣೆಃ** ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

**ಓ. ಕೇ. ಸ. ಇ. ಎ. ಒ.**

ಸಹಿ/-

1 ನೇ **ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**

**ಪ್ರ.ದ.ನ್ಯಾ.ದಂ.ರವರು,ತರೀಕೆರೆ.**

ನಾನು ಈಗ ಓದಿ ಹೇಳಿದಂತೆ ದಿನಾಂಕಃ **03-06-2021** - - - - ರಂದು ಪುನಃ ನೋಡಿದರೆ ಗುರುತಿಸುತ್ತೇನೆಂದು ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆಂದರೆ ಸರಿಯಲ್ಲ. ಸಾಕ್ಷಿಯ ಅಲ್ಲಗೆಳೆದ ಹೇಳಿಕೆ ಭಾಗವನ್ನು ನಿಪಿ-**4** ಎಂದು ಗುರುತಿಸಲಾಯಿತು.